# ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ರವರು ಮಂಡಿಸಿರುವ ಶೂನ್ಯವೇಳೆ ಸೂಚನೆಗೆ ಹೇಳಿಕೆ

ವಿಷಯ: ರಾಜ್ಯ ಸರ್ಕಾರ ಹಿಂದುಗಳ ವಿರೋಧಿಯಾಗಿ ಆಡಳಿತ ನಡೆಸುತ್ತಿದ್ದು, ಪೋಲೀಸರು ಕೂಡ ಕಾಂಗ್ರೇಸಿನ ಕೈಗೊಂಬೆಯಾಗಿ ಕೆಲಸ ಮಾಡುತ್ತಿರುವುದಕ್ಕೆ ಇತ್ತೀಚೆಗೆ ಬಿ.ಜೆ.ಪಿ. ಯುವ ಮೋರ್ಚಾ ಅಧ್ಯಕ್ಷರ ಮೇಲೆ ನಡೆದಿರುವ ಹಲ್ಲೆಯೇ ಸಾಕ್ಷಿಯಾಗಿದೆ. ಈ ಕುರಿತು ಹಿಂದುತ್ವ ಪರ ಸಂಘಟನೆಗಳಿಂದ ಪ್ರತಿಭಟನೆ ನಡೆದಿರುವ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ವರದಿ ಪ್ರಕಾರ ಬಿ.ಜೆ.ಪಿ. ಯುವ ಮೋರ್ಚಾ ಅಧ್ಯಕ್ಷ ಅಭಿನಾಶ ಮಣ್ಣಿಕೆರೆ, ಅವರು ಅಮಾಯಕರಾಗಿದ್ದರು, ಅವರನ್ನು ವಿನಾಕಾರಣ ಬಂಧಿಸಿರುವ ಪೋಲೀಸರು ಠಾಣೆಯಲ್ಲಿ ಅವರಿಗೆ ಮಧ್ಯರಾತ್ರಿ ನಾಡಗೀತೆ, ರಾಷ್ಟ್ರಗೀತೆ ಹೇಳುವಂತೆ ಒತ್ತಾಯಪಡಿಸಿ ಹಲ್ಲೆ ನಡೆಸಿದ್ದಾರೆ. ಆದರೆ ಶಿಷ್ಟಾಚಾರ ಪ್ರಕಾರ ನಾಡಗೀತೆ ಮತ್ತು ರಾಷ್ಟ್ರಗೀತೆಯನ್ನು ಯಾವ ಸಂದರ್ಭದಲ್ಲಿ ಹಾಡಬೇಕೆನ್ನುವ ಪರಿಜ್ಞಾನವಿಲ್ಲದೆ ಇವರು ಒತ್ತಾಯ ಪೂರ್ವಕವಾಗಿ ಹಾಡಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಮೊಬೈಲ್ ಹೊಡೆದು ಹಾಕಿ ಮಾಡದ ತಪ್ಪನ್ನು ಒಪ್ಪಿಕೊಳ್ಳುವಂತೆ ಒತ್ತಡ ಹೇರಿರುವ ಸಂಗತಿ ತಿಳಿದು ಬಂದಿರುತ್ತದೆ.

ಈ ಪ್ರಕರಣ ಈ ಸರ್ಕಾರದ ಹಿಂದುಗಳ ವಿರೋಧಿ ಧೋರಣೆಗೆ ಮುನ್ನುಡಿ ಹಾಕಿದಂತಾಗಿದ್ದು, ಮುಂಬರುವ ದಿನಗಳಲ್ಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ಪ್ರಕರಣಗಳು ಮರುಕಳಿಸುವಂತ ಸಂದರ್ಭಗಳು ಹೆಚ್ಚಾಗಿದೆ. ಸರ್ಕಾರದ ಪ್ರೋತ್ಸಾಹ ನೀಡಿ ಉದ್ದೇಶಪೂರ್ವಕವಾಗಿ ಇಂತಹ ಪ್ರಕರಣಗಳನ್ನು ದಾಖಲಿಸುವ ಮೂಲಕ ರಾಜ್ಯದ ಜನರ ದಿಕ್ಕನ್ನು ತಪ್ಪಿಸುವ ಕೆಲಸಕ್ಕೆ ಕೈ ಹಾಕಬಾರದು. ಜಾತ್ಯಾತೀತವಾಗಿ ಧರ್ಮಾತೀತವಾಗಿ ಸರ್ಕಾರ ಕೆಲಸ ನಿರ್ವಹಿಸುವಂತಾಗಬೇಕು. ಹಿಂದು ಕಾರ್ಯಕರ್ತರಿಗೆ ರಕ್ಷಣೆ ಸಿಗುವಂತಾಗಬೇಕು ಹಿಂದು ಕಾರ್ಯಕರ್ತರನ್ನು ಗುರಿಯಾಗಿಟ್ಟುಕೊಂಡು ಇಂತಹ ಪ್ರಕರಣಗಳನ್ನು ದಾಖಲಿಸುವುದನ್ನು ನಿಲ್ಲಿಸಬೇಕು. ರಾಜ್ಯ ಸರ್ಕಾರ ಈ ಪ್ರಕರಣದ ಕುರಿತು ಸತ್ಯಾಸತ್ಯತೆಯನ್ನು ತಿಳಿದು ಪರಿಪೂರ್ಣವಾಗಿ ತನಿಖೆ ನಡೆದು ಡಿವೈಎಸ್‌ಪಿ, ಮಿಥುನ್ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕೆಂದು ಹಾಗೂ ಮನೋಸ್ಪೋ ಇಚ್ಛೆ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ ಕಡಿವಾಣ ಹಾಕಬೇಕೆಂಬುದರ ಬಗ್ಗೆ.

ಉತ್ತರ: ದಿನಾಂಕ.30.06.2023 ರಂದು ಬೆಳಗ್ಗೆ 11.00 ಗಂಟೆಯ ಸಮಯದಲ್ಲಿ, ಸಕಲೇಶಪುರ, ಹಳೇಬಸ್ ನಿಲ್ದಾಣದ ಬಳಿ ಬಜರಂಗದಳದ ಮುಖಂಡ ಶ್ರೀ ರಘು ಮತ್ತು ಅವರ ಹಿಂಬಾಲಕರು, ಸಕಲೇಶಪುರದ ದೇಖ್ಲಾ ಗ್ರಾಮದಲ್ಲಿ ದಿನಾಂಕ:27.06.2023 ರಂದು ಎಮ್ಮೆಯನ್ನು ಗುಂಡಿಟ್ಟು ಕೊಂದ ವಿಷಯವನ್ನು ಪ್ರಮುಖವಾಗಿಟ್ಟುಕೊಂಡು ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು, ಆ ವೇಳೆ ಸದರಿ ಶ್ರೀ ರಘು @ ರಾಘವೇಂದ್ರ ಸಾರ್ವಜನಿಕವಾಗಿ ಪ್ರಚೋದಿಸಿರುವದೇನೆಂದರೆ "ಮುಂದಿನ ದಿನಗಳಲ್ಲಿ ನಮ್ಮ ಮನೆಯ ಹಟ್ಟಿಯ ಹತ್ತಿರ. ಈ ರೀತಿಯಾದ ಜಿಹಾದಿಗಳು ಬಂದರೆ ಅಂದರೆ ನಮ್ಮ ಮನೆಯ ಹತ್ತಿರ ಬರುವ ಮೀನಿನ ವ್ಯಾಪಾರಿ, ತರಕಾರಿ ವ್ಯಾಪಾರಿಗಳು ನಮ್ಮ ಹಟ್ಟಿಗೆ ಬಂದರೆ, ನಮ್ಮ ಮನೆಯಲ್ಲಿರುವ ತೋಟದ ಕೋವಿಗಳು ಹೊರಗಡೆ ಬರುತ್ತವೆ. ಆಗ ನಾವು ಗುಂಡು ಹಾರಿಸುತ್ತೇವೆ ಎಂದು ಎಚ್ಚರಿಕೆ ಕೊಡುತ್ತಿದ್ದೇವೆ" ಎಂದು ಪ್ರಚೋದನೆ ಮಾಡಿ ಸಮುದಾಯಗಳ ಮಧ್ಯೆ ದ್ವೇಷವನ್ನು ಉಂಟು ಮಾಡುವುದು, ಮತ್ತು ಸೌಹಾರ್ದತೆಗೆ ಭಾದಕವಾಗುವಂತೆ ಭಾಷಣ ಮಾಡಿರುತ್ತಾರೆ. ಈ ವಿಚಾರವಾಗಿ ಸಕಲೇಶಪುರ ನಗರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 115/2013 ಕಲಂ 153(ಎ), 295(ಎ), 506 ಐಪಿಸಿ ರೆ/ವಿ ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಈ ಪಕರಣದಲ್ಲಿ ಪ್ರಮುಖ ಆರೋಪಿ ಶ್ರೀ ರಘು @ ರಾಘವೇಂದ್ರ ಮತ್ತು ಅವರ ಸಹಚರರು ತಲೆಮರೆಸಿಕೊಂಡಿದ್ದು, ಅವರ ಪತ್ತೆಗಾಗಿ ಕಲೆಹಾಕಿದ್ದ ತಾಂತ್ರಿಕ ಮತ್ತು ಇವರ ಸಾಕ್ಷಿದಾರರ ವಿಚಾರಣೆಯಲ್ಲಿ ದೊರಕಿದ ಮಾಹಿತಿ ಮೇರೆಗೆ ಶ್ರೀ ರಘು ರವರು ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕು

ವಾಸಿಯಾದ ಬಜರಂಗದಳದ ಕಾರ್ಯಕರ್ತ ಶ್ರೀ ಅವಿನಾಶ್ ಬಿನ್ ಲೇಟ್ ರವಿಗೌಡ ರವರನ್ನು ಭೇಟಿ ಮಾಡಿ, ನಂತರ ಸದರಿ ಶ್ರೀ ಅವಿನಾಶ್ ರವರ ಮೊಬೈಲ್ ಅನ್ನು ಉಪಯೋಗಿಸಿ ಇತರರಿಗೆ ವ್ಯಾಟ್ಸಪ್‌ನಲ್ಲಿ ಕರೆ ಮಾಡಿದ ಬಗ್ಗೆ ಮಾಹಿತಿ ದೊರೆತಿರುತ್ತದೆ. ಈ ಸಂಬಂಧವಾಗಿ ದಿನಾಂಕ: 01.07.2023ರಂದು ಬೆಳಿಗ್ಗೆ ಶ್ರೀ ಅವಿನಾಶ್ ರವರು ಆರೋಪಿ ಶ್ರೀ ರಘು ರವರನ್ನು ಖುದ್ದು ಭೇಟಿ ಮಾಡಿದ ಕುರಿತು ಪ್ರಕರಣದ ತನಿಖಾ ತಂಡವು ಮೂಡಿಗೆರೆಯಲ್ಲಿ ರಾತ್ರಿ ಸಮಯದಲ್ಲಿ ಶ್ರೀ ಅವಿನಾಶ್ ರವರನ್ನು ಭೇಟಿ ಮಾಡಿ ವಿಚಾರಣೆ ಮಾಡಿದಾಗ, ಯಾವುದೇ ಮಾಹಿತಿ ನೀಡದೇ ಸಹಕರಿಸದಿರುವ ಕಾರಣ ಸದರಿ ಶ್ರೀ ಅವಿನಾಶ್ ರವರನ್ನು ವಿಚಾರಣೆಗಾಗಿ ಸಕಲೇಶಪುರ ನಗರ ಪೊಲೀಸ್ ಠಾಣೆಗೆ ಕರೆತಂದಿದ್ದು, ಶ್ರೀ ಅವಿನಾಶ್ ರವರನ್ನು ಠಾಣೆಯಲ್ಲಿಯೂ ಸಹ ಸದರಿ ಶ್ರೀ ರಘು ರವರು ಯಾವ ಕಡೆ ಹೋದರೆಂದು ಹಾಗೂ ಯಾರಿಗೆ ಕರೆ ಮಾಡಿದರೆಂದು ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ನೀಡದೇ ಸಹಕಾರ ನೀಡಿರುವುದಿಲ್ಲ. ಯುವ ಮೋರ್ಚಾ ಅಧ್ಯಕ್ಷರಾದಂತಹ ಶ್ರೀ ಅವಿನಾಶ್ ಮಣ್ಣಿಕೆರೆ ಇವರಿಗೆ ಮಧ್ಯರಾತ್ರಿ ನಾಡಗೀತೆ, ರಾಷ್ಟ್ರಗೀತೆ ಹೇಳುವಂತೆ ಒತ್ತಾಯಪಡಿಸಿರುವುದಿಲ್ಲ. ಇವರಿಗೆ ಯಾವುದೇ ರೀತಿಯ ಅವಾಚ್ಯ ಶಬ್ದಗಳಿಂದ ನಿಂದಿಸುವುದಾಗಲೀ, ಹಲ್ಲೆ ಮಾಡುವುದಾಗಲೀ ಮಾಡಿರುವುದಿಲ್ಲ ಹಾಗೂ ಅವರ ಮೊಬೈಲ್ ಒಡೆದು ಹಾಕಿರುವುದಿಲ್ಲ.

ನಂತರದಲ್ಲಿ ಇವರ ಹೇಳಿಕೆ ಪಡೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಇವರ ಸ್ನೇಹಿತ ಶ್ರೀ ಮದನ್ ಕುಮಾರ್ ರವರೊಂದಿಗೆ ದಿನಾಂಕ: 02.07.2023ರಂದು ಸಂಜೆ 6.00 ಗಂಟೆಯ ಸಮಯದಲ್ಲಿ ಕಳುಹಿಸಿಕೊಡಲಾಗಿದೆ. ಸದರಿ ಶ್ರೀ ಅವಿನಾಶ್ ರವರು ಪೊಲೀಸರು ಹಲ್ಲೆ ಮಾಡಿರುತ್ತಾರೆಂದು ಆಪಾದಿಸಿರುವುದು ಸರಿಯಲ್ಲವೆಂದು ವೈದ್ಯಕೀಯ ಪರೀಕ್ಷಾ ವರದಿಯಿಂದ ಕಂಡುಬರುತ್ತದೆ. ಅಲ್ಲದೇ, ಶ್ರೀ ರಘು ಹಾಗೂ ಇತರರನ್ನು ಕಾನೂನು ಕ್ರಮದಿಂದ ಪಾರು ಮಾಡುವ ದುರುದ್ದೇಶದಿಂದ ಶ್ರೀ ಅವಿನಾಶ್ ರವರು ಹೇಳಿಕೆ ನೀಡಿರುವುದು ಕಂಡುಬರುತ್ತದೆ.

ಸಂಖ್ಯೆ: ಒಇ 205 ಪಿಇಜಿ 2023

ಜಿ.ಪರಮೇಶ್ವರ

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು